## ಕರ್ನಾಟಕ ಸರ್ಕಾರ

ಸಂಖ್ಯೆ: ಸಿಆಸುಇ 2 ಸೇನಿಸಿ 93

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಧಾನ ಸೌಧ,
ಬೆಂಗಳೂರು, ದಿನಾಂಕ: 15-1-93.

### ಸುತ್ತೋಲೆ

ವಿಷಯ: ಸರ್ಕಾರಿ ಕಛೇರಿಗಳಲ್ಲಿ ಮತ್ತು ಸಾರ್ವಜನಿಕ ಕಛೇರಿಗಳಲ್ಲಿ ಧೂಮಪಾನ ಮಾಡುವುದನ್ನು ನಿಷೇಧಿಸುವ ಬಗ್ಗೆ.

—0—

ಅನೇಕ ಸರ್ಕಾರಿ ಅಧಿಕಾರಿಗಳು : ನೌಕರರು ತಾವು ಕೆಲಸ ಮಾಡುತ್ತಿರುವ ಸರ್ಕಾರಿ ಕಛೇರಿಗಳಲ್ಲಿ ಮತ್ತು ಸಾರ್ವಜನಿಕ ಕಛೇರಿಗಳಲ್ಲಿ ಧೂಮಪಾನ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದ್ದು, ಸರ್ಕಾರವು ಅದನ್ನು ತಕ್ಷಣದಿಂದ ಜಾರಿಗೆ ಬರುವಂತೆ ನಿಷೇಧಿಸಿದೆ. ಅದರಂತೆ ಸರ್ಕಾರಿ ಮತ್ತು ಸಾರ್ವಜನಿಕ ಕಛೇರಿಗಳಲ್ಲಿ ಧೂಮಪಾನ ಮಾಡುವ ಸಾರ್ವಜನಿಕರು, ಅಧಿಕಾರಿಗಳು ಹಾಗೂ ನೌಕರರನ್ನು ತೀವ್ರವಾಗಿ ಪರಿಗಣಿಸಿ ಶಿಸ್ತು ಕ್ರಮಕ್ಕೆ ಒಳಪಡಿಸಲಾಗುವುದು.

ಆದುದರಿಂದ, ಸರ್ಕಾರದ ಎಲ್ಲಾ ಆಯುಕ್ತರು: ಕಾರ್ಯದರ್ಶಿಗಳು ಮತ್ತು ಇಲಾಖಾ ಮುಖ್ಯಸ್ಥರುಗಳು ಈ ದಿಶೆಯಲ್ಲಿ ನಿಗವಹಿಸಿ, ಅವರ ಅಧೀನದಲ್ಲಿ ಕೆಲಸ ಮಾಡತಕ್ಕ ಎಲ್ಲಾ ಅಧಿಕಾರಿಗಳು : ನೌಕರರ ಗಮನಕ್ಕೆ ತರುವುದೇ ಅಲ್ಲದೆ ಸರ್ಕಾರದ ಈ ಧೋರಣೆಯನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು ಪೂರ್ಣ ಸಹಕಾರ ನೀಡಬೇಕೆಂದು ಕೋರಲಾಗಿದೆ.

ಸಹಿ:—
(ಜಾ.ಕ್ರಿ.ಲಿನ್)
ಸರ್ಕಾರದ ಮುಖ್ಯ ಕಾರ್ಯದರ್ಶಿ.

ಇವರಿಗೆ:

ಸಂಕಲನಕಾರರು, ಕರ್ನಾಟಕ ರಾಜ್ಯಪತ್ರ, ಇವರಿಗೆ ಮುಂದಿನ ಸಂಚಿಕೆಯಲ್ಲಿ ಪ್ರಕಟಿಸುವುದಕ್ಕೆ.

ಪ್ರತಿ :

1) ಸರ್ಕಾರದ ಎಲ್ಲಾ ಆಯುಕ್ತರು : ಕಾರ್ಯದರ್ಶಿಗಳಿಗೆ
2) ಸರ್ಕಾರದ ಎಲ್ಲಾ ಇಲಾಖಾ ಮುಖ್ಯಸ್ಥರು
3) ಸರ್ಕಾರದ ಮುಖ್ಯ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ
4) ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ
5) ಸರ್ಕಾರದ ಉಪ ಕಾರ್ಯದರ್ಶಿ, ಸಿಆಸುಇ(ಆಡಳಿತ),(ಆಡಳಿತ ಸುಧಾರಣೆ) (ಶಿಷ್ಟಾಚಾರ) (ರಾಜಕೀಯ)
6) ಪತ್ರಿಕಾ ಪ್ರಕಟಣೆಗಾಗಿ.
7) ಶಾಖಾ ರಕ್ಷಾ ಕಡತ
8) ಬಿಡಿ ಪ್ರತಿ.

"ಯಥಾ ಪ್ರತಿ"

(ಕೆ.ಎಲ್. ಜಯರಾಮ್),
ಶಾಖಾಧಿಕಾರಿಗಳು
ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ
ಇಲಾಖೆ(ಸೇವಾ ನಿಯಮಗಳು).